**ಸಾಕ್ಷಿಯನ್ನು ದಿನಾಂಕ 05.06.2023 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಿದೆ ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಈ ಕೇಸಿಗೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಮತ್ತು ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯ ಪರಿಚಯ ನನಗೆ ಇದ್ದಿಲ್ಲ. ನಮ್ಮ ಫಾರ್ಮಸಿಯಿಂದ ನಾವು ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳಿಗೆ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದೆವು. ಡಾಃಡಿ.ಡಿ.ಶಶಿಧರ್ ರವರ ಹೆಸರಿನಲ್ಲಿ ನಮ್ಮ ಅಂಗಡಿಯಿಂದ ಪರ್ಚೇಸ್ ಆರ್ಡರ್ ಬರುತ್ತಿತ್ತು. ಆ ರೀತಿ ಬಂದ ಪರ್ಚೇಸ್ ಆರ್ಡರ್ ನಲ್ಲಿ ನಾನು ಅಂಗಡಿಯಲ್ಲಿ ವ್ಯವಹಾರ ಮಾಡುತ್ತಿದ್ದಾಗ ಡಾಃಡಿ.ಡಿ.ಶಶಿಧರ್ ರವರಿಂದ ಬ್ಯುಪ್ರೆಜೆಸಿಕ್ ಇಂಜೆಂಕ್ಷನ್ ಸರಬರಾಜು ಮಾಡುವಂತೆ ಪರ್ಚೇಸ್ ಆರ್ಡರ್ ಬಂದಿತ್ತೇ ಎನ್ನುವುದು ನನಗೆ ಈಗ ನೆನಪಿಲ್ಲ. ಈ ಕೇಸಿನಲ್ಲಿ ನನ್ನ ಗಂಡನನ್ನು ಪೊಲೀಸರು ವಿಚಾರ ಮಾಡಿರುತ್ತಾರೆಯೇ ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಆರೋಪಿಯ ವಿರುದ್ಧ ಯಾವ ಕಾರಣಕ್ಕಾಗಿ ಈ ಪ್ರಕರಣ ದಾಖಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ).**

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ರಾಜು ಏಜೆನ್ಸಿ ಮೆಡಿಕಲ್ ಹೋಲ್ಸೇಲ್ ಅಂಗಡಿಯ ಕಛೇರಿಯಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ಸಕಲೇಶಪುರದ ಡಾಃಡಿ.ಡಿ.ಶಶಿಧರ್ ರವರಿಂದ ಬ್ಯುಪ್ರೆಜೆಸಿಕ್ ಇಂಜೆಂಕ್ಷನ್ ಸರಬರಾಜು ಮಾಡುವಂತೆ ಪರ್ಚೇಸ್ ಆರ್ಡರ್ ಬಂದಿತ್ತು ಎಂದರೆ ಸರಿಯಲ್ಲ. ಆ ರೀತಿ ಪರ್ಚೇಸ್ ಆರ್ಡರ್ ಬಂದ ಮೇರೆಗೆ ನಾನು ಡಾಃಡಿ.ಡಿ.ಶಶಿಧರ್ ರವರಿಗೆ ಬ್ಯುಪ್ರೆಜೆಸಿಕ್ ಇಂಜೆಂಕ್ಷನ್ ಸರಬರಾಜು ಮಾಡಿದ್ದೇನೆ ಎಂದರೆ ಸರಿಯಲ್ಲ. ಹೀಗೆ ಸರಬರಾಜು ಮಾಡಿದ ಬಗ್ಗೆ ನನಗೆ ಅದರ ಬಗ್ಗೆ ಹಣ ಡಿಡಿ ಮತ್ತು ಚೆಕ್ ಮೂಲಕ ಪಾವತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ನನಗೆ 1 ನೇ ಆರೋಪಿಯು ಡಾಃಡಿ.ಡಿ.ಶಶಿಧರ್ ರವರ ಕ್ಲಿನಿಕ್ ನ ಹೆಸರಿನಲ್ಲಿ ಲೆಟರ್ ಹೆಡ್, ಸೀಲು ಮತ್ತು ಸಹಿಯನ್ನು ಫೋರ್ಜರಿ ಮಾಡಿಕೊಂಡು ನಮ್ಮ ಏಜೆನ್ಸಿಯಿಂದ ಬ್ಯುಪ್ರೆಜೆಸಿಕ್ ಇಂಜೆಂಕ್ಷನ್ ನ್ನು ತರಿಸಿಕೊಳ್ಳುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ.

ಆ ರೀತಿ ತರಿಸಿಕೊಳ್ಳುತ್ತಿದ್ದ ಸದರಿ ಔಷಧಿಯನ್ನು 1 ನೇ ಆರೋಪಿಯು ಹೆಚ್ಚಿನ ಹಣಕ್ಕೆ ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ದಿನಾಂಕ 29.01.2010 ರಂದು ವಿಚಾರಣೆ ಮಾಡಿರುತ್ತಾರೆ ಮತ್ತು ಆ ಸಮಯದಲ್ಲಿ ನಾನು ಪೊಲೀಸರ ಮುಂದೆ ಈಗ ನನಗೆ ಓದಿ ಹೇಳಿದಂತೆ "ನಮ್ಮ ಯಜಮಾನರು ಸಪ್ನಾ ಫಾರ್ಮಾಸ್ಯೂಟಿಕಲ್ಸ್ ನಂಬರ್ 61 ಮತ್ತು 62 -------------ಬೆಂಗಳೂರು-18 ರವರಿಂದ ತರಿಸಿಕೊಳ್ಳುತ್ತಿದ್ದ ಬ್ಯೂಪೆಜೆಸಿಕ್ ಇಂಜೆಂಕ್ಷನ್ ಬಾಕ್ಸ್ ಗಳನ್ನು ಹೆಚ್ಚಿನ ಹಣಕ್ಕೆ ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದರೆಂದು ಅವರ ಮೇಲೆ ಸಕಲೇಶಪುರ ಟೌನ್ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ ಎಂದು ಗೊತ್ತಾಯಿತು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ-32 ಎಂದು ಗುರುತಿಸಲಾಗಿದೆ.

1 ನೇ ಆರೋಪಿಯು ಈ ಮೇಲೆ ಹೇಳಿದಂತೆ ಇಂಜೆಂಕ್ಷನ್ ನ್ನು ಡಾಃಡಿ.ಡಿ. ಶಶಿಧರ್ ರವರ ಹೆಸರಿನಲ್ಲಿ ತರಿಸಿಕೊಂಡು, ಅಕ್ರಮ ಹಣಸಂಪಾದನೆ ಮಾಡುವ ಉದ್ದೇಶದಿಂದ ಅವುಗಳನ್ನು ಹೆಚ್ಚಿನ ಹಣಕ್ಕೆ ಮಾರಾಟ ಮಾಡುತ್ತಿದ್ದರು ಎನ್ನುವ ನನಗೆ ಗೊತ್ತಿದ್ದರೂ ಸಹ ಮತ್ತು ಆ ಬಗ್ಗೆ ನಾನು ನಿಶಾನೆ.ಪಿ-32 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- 1 ನೇ ಆರೋಪಿ ಪರ ಶ್ರೀ ಎ ಹೆಚ್ ಬಿ ವಕೀಲರಿಂದ ಹಾಗೂ 2 ನೇ ಆರೋಪಿ ಪರ ಶ್ರೀ ಜೆ ಎಸ್ ವಕೀಲರಿಂದಃ-**

ಇರುವುದಿಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**

**ಸ್ಪೆಷಲ್ ನ್ಯಾಯಾಧೀಶರು, ಹಾಸನ.**